## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ** :- ಶ್ರೀ ಎಂ.ಆರ್.ಮಧುಸೂದನ, ಕಿರಿಯ ಇಂಜಿನಿಯರ್ ಇವರ ಅಮಾನತ್ತು ಅವಧಿಯನ್ನು ಕ್ರಮಬದ್ಧಗೊಳಿಸುವ ಬಗ್ಗೆ- ಆದೇಶ

**ಓದಲಾಗಿದೆ** :- ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಮೈಸೂರು ಇವರ ಪತ್ರ ಸಂಖ್ಯೆ : ಸಿಸಿಎ / 38 / 2015-16, ದಿ: 19.07.2016

*****

**ಪ್ರಸ್ತಾವನೆ :**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಮೈಸೂರು ಇವರು ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ : 19.07.2016ರ ಪತ್ರದಲ್ಲಿ ತಾಲ್ಲೂಕ್ ಪಂಚಾಯತ್, ಹುಣಸೂರು ಇಲ್ಲಿ 1988-99ನೇ ಸಾಲಿನಲ್ಲಿ ಕಿರಿಯ ಇಂಜಿನಿಯರ್ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ಎಂ.ಆರ್.ಮಧುಸೂದನ ರವರು ಹುಣಸೂರು ಮತ್ತು ಹೆಚ್.ಡಿ.ಕೋಟೆ ತಾಲ್ಲೂಕಿನ ಜೇನು ಕುರುಬರಿಗೆ ಸೇರಿದ ಹಳೆ ಮನೆಗಳ ದುರಸ್ತಿ ಕಾರ್ಯವನ್ನು ನಿರ್ವಹಿಸದೆ ರೂ. 40,368/-ಗಳನ್ನು ದುರುಪಯೋಗಪಡಿಸಿಕೊಂಡಿದ್ದು, ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಅವರ ಕಚೇರಿ ದಿನಾಂಕ : 07.08.1989ರ ಆದೇಶದಲ್ಲಿ ಸದರಿಯವರನ್ನು ಅಮಾನತ್ತುಗೊಳಿಸಲಾಗಿತ್ತು. ನಂತರ ದಿನಾಂಕ 23.03.1990ರ ಆದೇಶದಲ್ಲಿ ಅವರ ಮೇಲಿನ ವಿಚಾರಣೆಯನ್ನು ಕಾಯ್ದಿರಿಸಿ, ಸೇವೆಯಲ್ಲಿ ಪುನರ್ ಸ್ಥಾಪಿಸಲಾಗಿತ್ತು. ತದನಂತರ ಸದರಿ ನೌಕರರ ವಿರುದ್ಧದ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ಕಚೇರಿಯು ಸಲ್ಲಿಸಿದ್ದ ತನಿಖಾ ವರದಿಯನುಸಾರ ಸರ್ಕಾರವು ಇಲಾಖಾ ವಿಚಾರಣೆ ಜರುಗಿಸಿ, ಶ್ರೀ ಎಂ.ಆರ್.ಮಧುಸೂದನ, ಕಿರಿಯ ಇಂಜಿನಿಯರ್ ಇವರ ಮೇಲಿನ ಆರೋಪವು ಸಾಬೀತಾಗಿದೆಂದು ನಿರ್ಣಯಿಸಿ, ಅವರಿಂದ ಸರ್ಕಾರಕ್ಕೆ ಉಂಟಾದ ಆರ್ಥಿಕ ನಷ್ಟದ ಮೊತ್ತ ರೂ. 10,093/-ಗಳನ್ನು ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಗಳು, 1957ರ ನಿಯಮ(iv)ರಂತೆ ವಸೂಲು ಮಾಡುವ ದಂಡನೆ ವಿಧಿಸಲಾಗಿತ್ತು. ಆದರೆ ಸದರಿಯವರು ಅಮಾನತ್ತಿನಲ್ಲಿ ಕಳೆದ ದಿನಾಂಕ : 07.08.1988 ರಿಂದ 23.03.1990ರ ವರೆಗಿನ ಅವಧಿಯನ್ನು ಪರಿಗಣಿಸುವ ಬಗ್ಗೆ ಸರ್ಕಾರದ ಆದೇಶ ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದೆ. ಶ್ರೀ ಎಂ.ಆರ್.ಮಧುಸೂದನ, ಕಿರಿಯ ಇಂಜಿನಿಯರ್ ರವರ ಮೇಲಿನ ಆರೋಪವು ಇಲಾಖಾ ವಿಚರಣೆಯಲ್ಲಿ ಸಾಬೀತಾಗಿದ್ದು, ಸದರಿಯವರಿಂದ ಉಂಟಾದ ನಷ್ಟದ ಮೊತ್ತ ರೂ. 10,093/-ಗಳನ್ನು ವಸೂಲು ಮಾಡಲಾಗಿರುವುದರಿಂದ, ಸದರಿಯವರು ಅಮನತ್ತಿನಲ್ಲಿ ಕಳೆದ ಅವಧಿಯನ್ನು ಸಂಬಂಧಸಿದ ನೌಕರರ ಕೋರಿಕೆಯ ಮೇರೆಗೆ ಕರ್ನಾಟಕ ನಾಗರೀಕ ಸೇವಾ ನಿಯಮಗಳು ನಿಯಮ 100(7)ರ ಪ್ರಕಾರ ಸಕ್ರಮಗೊಳಿಸಲು ಅವಕಾಶವಿರುತ್ತದೆ.

ಶ್ರೀ ಎಂ.ಆರ್.ಮಧುಸೂದನ, ಕಿರಿಯ ಇಂಜಿನಿಯರ್ ಇವರು ಅಮಾನತ್ತಿನಲ್ಲಿ ಕಳೆದ ದಿನಾಂಕ : 07.08.1988 ರಿಂದ 23.03.1990ರ ವರೆಗಿನ ಅವಧಿಯನ್ನು ಅವರ ಖಾತೆಯಲ್ಲಿರುವ ರಜೆಯೆಂದು ಪರಿಗಣಿಸುವಂತೆ ಕೋರಿಕೆ ಸಲ್ಲಿಸಿರುತ್ತಾರೆ.

ಸರ್ಕಾರವು ಅವರ ಅರ್ಜಿಯನ್ನು ಪರಿಗಣಿಸಿ ಹಕ್ಕಿನಲ್ಲಿರುವ ರಜೆಗಳನ್ನು ನಿಯಮಾನುಸಾರ ಮಂಜೂರು ಮಾಡಿ ಅಮಾನತ್ತಿನ ಅವಧಿಯನ್ನು ಸಕ್ರಮಗೊಳಿಸಲು ತೀರ್ಮಾನಿಸಿದೆ. ಆದುದರಿಂದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 255 ಜಿಪಅ 2016, ಬೆಂಗಳೂರು, ದಿನಾಂಕ : 15.06.2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಸರ್ಕಾರವು ಶ್ರೀ ಎಂ.ಆರ್.ಮಧುಸೂದನ, ಹಿಂದಿನ ಕಿರಿಯ ಇಂಜಿನಿಯರ್, ಕ್ಷೇತ್ರಾಭಿವೃದ್ಧಿ ಅಧಿಕಾರಿಯವರ ಕಚೇರಿ, ಹುಣಸೂರು (ಪ್ರಸಕ್ತ ಕಿರಿಯ ಇಂಜಿನಿಯರ್, ಕಾವೇರಿ ನೀರಾವರಿ ನಿಗಮ ನಿಯಮಿತ, ಕಬಿನಿ ಜಲಾಶಯ ವಿಭಾಗ, ಹೆಚ್.ಡಿ.ಕೋಟೆ, ಮೈಸೂರು ಜಿಲ್ಲೆ) ಇವರು

-2

ಅಮಾನತ್ತಿನಲ್ಲಿ ಕಳೆದ ದಿನಾಂಕ : 07.08.1989 ರಿಂದ 23.03.1990 ರವರೆಗಿನ 229 ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಗಳು ನಿಯಮ 100(7)ರ ಪ್ರಕಾರ ಈ ಕೆಳಕಂಡಂತೆ ಮಂಜೂರು ಮಾಡಿ ಸಕ್ರಮಗೊಳಿಸಿದೆ :-

| ಕ್ರಸಂ | ಅವಧಿ | ವಿವರ |
|---|---|---|
| 1. | ದಿನಾಂಕ : 07.08.1989 ರಿಂದ 04.12.1989ರ ವರೆಗೆ 120 ದಿನಗಳು | ಪರಿವರ್ತಿತ ರಜೆ |
| 2. | ದಿನಾಂಕ : 0.12.1989 ರಿಂದ 23.03.1989ರ ವರೆಗೆ 109 ದಿನಗಳು | ಗಳಿಕೆ ರಜೆ |

ಸರ್ಕಾರವು ಈ ಮೇಲಿನ ರಜೆಗಳನ್ನು ಕರ್ನಾಟಕ ನಾಗರೀಕ ಸೇವಾ ನಿಯಮಗಳು ನಿಯಮ 198ರನ್ವಯ ಮಂಜೂರು ಮಾಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

15/06/2017

(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ :-

1. ಮಹಾಲೇಖಪಾಲರು, (ಲೆಕ್ಕಪತ್ರ ಅ & ಇ) ಕರ್ನಾಟಕ, ಬೆಂಗಳೂರು
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ / ಜಲಸಂಪನ್ಮೂಲ ಇಲಾಖೆ
3. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಮೈಸೂರು
5. ಕಾರ್ಯಪಾಲಕ ಇಂಜಿನಿಯರ್, ಕಾವೇರಿ ನೀರಾವರಿ ನಿಗಮ ನಿಯಮಿತ, ಕಬಿನಿ ಜಲಾಶಯ ವಿಭಾಗ, ಹೆಚ್.ಡಿ.ಕೋಟೆ, ಮೈಸೂರು ಜಿಲ್ಲೆ
6. ಶ್ರೀ ಎಂ.ಆರ್.ಮಧುಸೂದನ, ಕಿರಿಯ ಇಂಜಿನಿಯರ್, ಕಾರ್ಯಪಾಲಕ ಇಂಜಿನಿಯರ್ ರವರ ಕಚೇರಿ, ಕಾವೇರಿ ನೀರಾವರಿ ನಿಗಮ ನಿಯಮಿತ, ಕಬಿನಿ ಜಲಾಶಯ ವಿಭಾಗ, ಹೆಚ್.ಡಿ.ಕೋಟೆ, ಮೈಸೂರು ಜಿಲ್ಲೆ

ಪ್ರತಿಯನ್ನು :

1. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ / ಜಂಟಿ ಕಾರ್ಯದರ್ಶಿ (ಆಡಳಿತ) / ಉಪ ಕಾರ್ಯದರ್ಶಿ (ಆಡಳಿತ) / ಆಂತರಿಕ ಆರ್ಥಿಕ ಸಲಹೆಗಾರರು ಇವರುಗಳ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರಿಗೆ
2. ಮೇಲ್ವಿಚಾರಕರು, ಗಣಕಯಂತ್ರ ವಿಭಾಗ, ಗ್ರಾ.ಅ.ಪಂ.ರಾಜ್ ಇಲಾಖೆ ಇವರಿಗೆ ವೆಬ್‌ಸೈಟಿನಲ್ಲಿ ಪ್ರಕಟಿಸುವ ಸಲುವಾಗಿ
3. ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು

*****